ಅಸಲು ದಾವಾ ನಂ. 8/2023 ಡಿಡಬ್ಲೂ : 1

ದಿನಾಂಕಃ 24-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿಯರ ಪರವಾಗಿಃ ಶ್ರೀ ಬಿ ಡಿ ಎಸ್ ವಕೀಲರಿಂದಃ**

5. ನಾರಾಯಣ ಎಂದರೆ ನನ್ನ ತಂದೆ ಹೆಸರು. ನನ್ನನ್ನು ಮಿರ್ಜಾನಗೆ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನ ಗಂಡನ ಹೆಸರು ಬೊಬ್ಬು ಬೀರಪ್ಪಾ ಅಂಬಿಗ. ಮಿರ್ಜಾನದಲ್ಲಿ ನನ್ನ ಗಂಡನ ಕುಟುಂಬಕ್ಕೆ ಸೇರಿದ ಮನೆ ಇದೆ ಎಂದರೆ ಸರಿ . ಮದುವೆಯಾದ ನಂತರ ನಾನು ಗಂಡನ ಮನೆ ಮಿರ್ಜನಗೆ ಹೋಗಲಿಲ್ಲ . ಮದುವೆಯಾದ ನಂತರ ನನ್ನನ್ನು ತಂದೆ ಮನೆಯಲ್ಲೇ ಇಟ್ಟುಕೊಂಡಿದ್ದರು . ನನ್ನ ವೋಟಿಂಗ್ ಕಾರ್ಡ ತಂದೆ ಮನೆಯ ವಿಳಾಸದಲ್ಲಿಯೇ ಇದೆ .

6. ಶಂಕರ ಸುಕ್ರು ಅಂಬಿಗ ನನಗೆ ಪರಿಚಯ . ಶಂಕರ ಸುಕ್ರು ಅಂಬಿಗರವರ ತಾಯಿ ಸಿನ್ನು ಜಟ್ಟಿ ಅಂಬಿಗರವರ ಸಹೋದರಿ ಎಂದರೆ ಸರಿ. ಸಿನ್ನು ಜಟ್ಟಿ ಅಂಬಿಗ ನಮಗೆ ಸಂಬಂಧವಿಲ್ಲ . ಸಿನ್ನು ಜಟ್ಟಿ ಅಂಬಿಗರವರು ದಾವಾ ಆಸ್ತಿಯಲ್ಲಿ ಒಂದು ಕವಲಿನ ಹಿಸ್ಸಾದಾರರು ಎಂದರೆ ಸರಿ . ಮನೆ ನಂ. 68 ಶಂಕರ ಸುಕ್ರು ಅಂಬಿಗರವರ ಮನೆ ನಂಬರ ಎಂದರೆ ಸರಿಯಲ್ಲ . ಮಿರ್ಜಾನದಿಂದ ಅಘನಾಶಿನಿಗೆ ಬಂದಾಗ ರೇಶನ್ ಕಾರ್ಡ ಮಾಡಿಕೊಂಡಿರುತ್ತೇವೆ ಎಂದರೆ ಸರಿ . ರೇಶನ್ ಕಾರ್ಡ ಮಾಡುವಾಗ ಮನೆಯ ಅಡ್ರೆಸ್ ಬೇಕು ಎಂದರೆ ಸರಿ . ಆ ರೀತಿ ಮನೆ ಅಡ್ರೆಸ್ ಬೇಕು ಎಂದು ನಾನು ಶಂಕರ ಸುಕ್ರು ಅಂಬಿಗರವರಿಗೆ ಹೇಳಿದಾಗ ಅವರು ನನಗೆ ಅವರ ಮನೆಯ ಒಂದು ಭಾಗದಲ್ಲಿ ವಾಸವಿದ್ದೇನೆ ಎಂದು ಪತ್ರ ಕೊಟ್ಟರು ಎಂದರೆ ಸರಿಯಲ್ಲ . ಹಾಗಾಗಿ ಅವರ ಮನೆ ನಂ. 68 ನಮ್ಮ ಮನೆ ನಂ. 68/1 ಎಂದು ಆಯಿತು ಎಂದರೆ ಸರಿಯಲ್ಲ. ಎಷ್ಟನೇ ಇಸವಿಯಿಂದ ಮನೆ ನಂ. 68/1 ರಲ್ಲಿ ಇದ್ದೆವೆ ಇಸ್ವಿ ಗೊತ್ತಿಲ್ಲ. ನನ್ನ ಮದುವೆಯಾದ ವರ್ಷ ಗೊತ್ತಿಲ್ಲ. ನನ್ನ ಮದುವೆಯಾಗಿ ಅಂದಾಜು 50 ವರ್ಷಗಳಾಗಿರಬೇಕು. ನಮ್ಮ ದೊಡ್ಡ ಮಗನಿಗೆ ಎಷ್ಟು ವರ್ಷ ಗೊತ್ತಿಲ್ಲ. ಮನೆ ನಂ. 68/1 ನಮಗೆ ಬೇಕು ಎಂದು ಯಾವುದೇ ಹಿಸ್ಸೆದಾರರು ಕೇಳಿಲ್ಲ ಎಂದರೆ ಸರಿ . ಮದುವೆಯಾದ ನಂತರ ನಾನು ಗಂಡನ ಮನೆ ಮಿರ್ಜಾನಗೆ ಹೋಗಿರುತ್ತೇನೆ ಎಂದರೆ

ಸರಿಯಲ್ಲ . ಅಘನಾಶಿನಿಯಲ್ಲಿ ಯಾವಾಗಿನಿಂದ ಇದ್ದೇನೆ ಎಂದು ತೋರಿಸಲು ರೇಶನ್ ಕಾರ್ಡಯಾಗಲೀ , ವೋಟಿಂಗ್ ಕಾರ್ಡ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಅವರು ಹಾಜರು ಪಡಿಸುವಂತೆ ಕೇಳಿಲ್ಲ ಎಂದು ನುಡಿದಿರುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ನಾನು ಕಾಲು ಭಾಗ ಕೇಳಿದ್ದೆನು ಅದಕ್ಕೆ ವಾದಿ ಹಾಗೂ ಇತರ ಪ್ರತಿವಾದಿಯರು ತಕರಾರು ಮಾಡಿಲ್ಲ ಎಂದರೆ ಸರಿ . ನನ್ನ ವಾಸ್ತವ್ಯದ ಮನೆ ಪ್ರತ್ಯೇಕ ಹಕ್ಕನ್ನು ವಿಂಗಡಿಸಿ ಕೊಡು ಎಂದು ನಾನು ಮನೆ ನಂ. 68/1 ರಲ್ಲಿ ಕೇಳಿರುತ್ತೇನೆ ಎಂದರೆ ಸರಿ .

ಪ್ರತಿವಾದಿ ನಂ . 9 ರಿಂದ 13 ರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.